

# ಶಾಹಿದ್ ಮದುವೆ ಸುತ್ತ...



ಶಾಹಿದ್ ಕಪೂರ್ ಲವ್ ಸ್ಟೋರಿಗಳದ್ದೇ ಸಿನಿಮಾ ಮಾಡಬಹುದು ಎಂಬ ತಮಾಷೆ ಮಾತು ಬಿಟೌನ್ ಗಲ್ಲಿಗಳಲ್ಲಿ ಹರಿದಾಡುತ್ತಿತ್ತು. ಒಂದು ಅಧ್ಯಾಯ ಮುಗಿಯುತ್ತಿದ್ದಂತೆಯೇ ಮತ್ತೊಂದು ಪ್ರೇಮ ಕಥೆ ಹುಟ್ಟಿಕೊಳ್ಳುತ್ತಿತ್ತು. ಕೊನೆಗೂ ಪ್ರೇಯಸಿಯ ಹುಡುಕಾಟ ಅಂತ್ಯಕಂಡಿದೆ. ದೆಹಲಿ ಯುವತಿ ಮೀರಾ ರಜಪೂತ್ ಜತೆ ಶಾಹಿದ್ ಜುಲೈ 8ಕ್ಕೆ ಹಸೆಮಣೆ ಏರುತ್ತಿದ್ದಾನೆ.

ಅಂದಹಾಗೆ, ಮದುವೆಗೆ ಶಾಹಿದ್ ತನ್ನ ಯಾವ ಮಾಜಿ ಗೆಳತಿಯನ್ನೂ ಕರೆಯುತ್ತಿಲ್ಲವಂತೆ. ಶಾಹಿದ್ ಮದುವೆಗೆ ಆಹ್ವಾನ ನೀಡಿಲ್ಲ ಎಂದು ಆತನ ಹಳೆಯ ಪ್ರೇಯಸಿಯೊಬ್ಬಳು ಹೇಳಿಕೊಂಡಿರುವುದಕ್ಕೆ ಶಾಹಿದ್ ಸ್ನೇಹಿತರು ಅಚ್ಚರಿ ವ್ಯಕ್ತಪಡಿಸಿದ್ದಾರೆ. ಶಾಹಿದ್‌ನೊಟ್ಟಿಗೆ ಓಡಾಡುತ್ತಿದ್ದ ಆಕೆ, ಚಿತ್ರೀಕರಣವೊಂದರಲ್ಲಿ ಸಹನಟನೊಂದಿಗೆ ಸುತ್ತಾಡಿ ಗುಲ್ಲೆಬ್ಬಿಸಿದ್ದಳು. ಬಳಿಕ ಆಕೆಯನ್ನು ಶಾಹಿದ್ ಒಪ್ಪಿಕೊಳ್ಳಲಿಲ್ಲ. ಹೀಗಿರುವಾಗ ಆಕೆಯನ್ನು ಮದುವೆಗೆ ಕರೆಯಬೇಕೆ ಎಂದು ಪ್ರತಿಕ್ರಿಯಿಸಿದ್ದಾರೆ. ಆ ನಟಿ ಯಾರು ಎಂಬುದು ಸದ್ಯಕ್ಕೆ ಬಹಿರಂಗವಾಗದ ಗುಟ್ಟು.

ಪ್ರೀತಿ ವಿಚಾರದಲ್ಲಿ ಶಾಹಿದ್ ನತದೃಷ್ಟ ಎನ್ನುವುದು ಆತನ ಗೆಳೆಯರ ಅಭಿಪ್ರಾಯ. ಮದುವೆಯಂತಹ ವಿಶೇಷ ಸಂಭ್ರಮದ ಗಳಿಗೆಯಲ್ಲಿ ಈ ಮಾಜಿ ಪ್ರೇಯಸಿಯರನ್ನೆಲ್ಲ ನೆನಪಿಸಿಕೊಳ್ಳಲು ಶಾಹಿದ್ ಬಯಸುವುದಿಲ್ಲವಂತೆ. ಈ ಮದುವೆಯಲ್ಲಿ ಶಾಹಿದ್ ತಾಯಿ ನೀಲಿಮಾ ಅಲ್ಲದೆ ಆತನ ಇಬ್ಬರು ಮಲತಾಯಂದಿರಾದ ಸುಪ್ರಿಯಾ ಮತ್ತು ವಂದನಾ ಕೂಡ ಹಾಜರಿರಲಿದ್ದಾರೆ. ಈ ನಡುವೆ ಬಿಟೌನ್ ವರ್ತಮಾನದ ಪ್ರಕಾರ ಶಾಹಿದ್ ತಮ್ಮ ಮಾಜಿ ಪ್ರೇಯಸಿಯರಲ್ಲೊಬ್ಬಳಾದ ಕರೀನಾ ಕಪೂರ್ ಮತ್ತು ಆಕೆಯ ಪತಿ ಸೈಫ್ ಅಲಿ ಖಾನ್‌ಗೆ ಮದುವೆಯ ಕರೆಯೋಲೆ ಕಳುಹಿಸಿದ್ದಾನಂತೆ.



ಟೆನಿಸ್ ತಾರೆ ಸಾನಿಯಾ ಮಿರ್ಜಾ, ನಟಿಯರಾದ ಅಮೃತಾ ರಾವ್, ವಿದ್ಯಾ ಬಾಲನ್, ಬಿಪಾಶಾ ಬಸು, ಕರೀನಾ ಕಪೂರ್, ಪ್ರಿಯಾಂಕಾ ಚೋಪ್ರಾ, ಸೋನಾಕ್ಷಿ ಸಿನ್ಹಾ ಹೀಗೆ ಶಾಹಿದ್ ಹೆಸರು ಹಲವು ನಟಿಯರೊಂದಿಗೆ ಕೇಳಿಬಂದಿತ್ತು. ಇಷ್ಟು ಮಂದಿಯಲ್ಲಿ ಕರೀನಾಗೆ ಆಹ್ವಾನ ಹೋಗಿರುವುದು ಖಚಿತವಾಗಿದೆ. ಉಳಿದ ಮಾಜಿ ಪ್ರೇಯಸಿಯರ ಹೆಸರು ಈಗಲೂ ಶಾಹಿದ್ ಮನದಲ್ಲಿದೆಯೋ ಇಲ್ಲವೋ...!

# ಸಲ್ಮಾನ್-ಪೂನಂ ಒಂದೇ ರೀತಿ ಅಂತೆ!

ಸದಾ ಸುದ್ದಿಯಲ್ಲಿರಲು ಬಯಸುವ ಪೂನಂ ಪಾಂಡೆ ಸ್ವಲ್ಪ ದಿನಗಳಿಂದ ಯಾಕೋ ಮರೆಯಾಗಿದ್ದಳು. ವಿವಾದಾತ್ಮಕ ಹೇಳಿಕೆ ನೀಡಿ ಆಕೆಗೂ ಬೇಸತ್ತು ಹೋಗಿರಬಹುದು ಎನಿಸುತ್ತದೆ. ಈಗ ತಮಾಷೆ ಮಾಡಲು ಪ್ರಾರಂಭಿಸಿದ್ದಾಳೆ. ಮೊನ್ನೆ ಮೊನ್ನೆ ಯೋಗ ಮಾಡುವ ತನ್ನದೇ 'ಶೈಲಿ'ಯ ವೀಡಿಯೊವನ್ನು ಆಕೆ ಹಂಚಿಕೊಂಡಿದ್ದಳು. ಅದು ಸಲ್ಮಾನ್‌ನ 'ಭಜರಂಗಿ ಭಾಯಿಜಾನ್' ಸಿನಿಮಾದ ಟ್ರೇಲರ್‌ಗಿಂತಲೂ ಹೆಚ್ಚು ಹಿಟ್ ಪಡೆದುಕೊಂಡಿದೆ. ಈ ನಡುವೆ ತನಗೂ ಸಲ್ಮಾನ್‌ಗೂ ಸಾಮ್ಯತೆಗಳಿವೆ ಎಂದಿದ್ದಾಳೆ ಪೂನಂ!

ಸಾಮಾನ್ಯವಾಗಿ ಎಲ್ಲಾ ನಟಿಯರೂ ಸಲ್ಮಾನ್‌ಖಾನ್ ಜತೆ ನಟಿಸಲು ಬಯಸುತ್ತಾರೆ. ಆದರೆ ಪೂನಂ ಅದಕ್ಕಿಂತಲೂ ತುಸು ಮುಂದೆ ಹೋಗುತ್ತಾಳೆ. ತನಗೂ ಸಲ್ಮಾನ್‌ಗೂ ಇರುವ ಹೋಲಿಕೆ ಎಂದರೆ ಬಟ್ಟೆ ತೆಗೆಯುವುದು ಎಂದಿದ್ದಾಳೆ ಈಕೆ! 'ಸಲ್ಮಾನ್ ಖಾನ್‌ಗೆ ಸಿನಿಮಾಗಳಲ್ಲಿ ಅಂಗಿ ತೆಗೆದು ದೇಹ ಪ್ರದರ್ಶಿಸುವುದು ಬಹಳ ಇಷ್ಟ. ನನಗೂ ಕೆಲವೊಮ್ಮೆ ಹಾಗೆಯೇ. ಸಲ್ಮಾನ್‌ನ ಆ ಗುಣ ನನಗಿಷ್ಟ. ಬಾಲ್ಯ ಮತ್ತು ಶಾಲಾ ದಿನಗಳಿಂದಲೂ ನಾನು ಸಲ್ಮಾನ್ ಖಾನ್‌ನನ್ನು ನೋಡುತ್ತಿದ್ದೆ. ಪ್ರತಿ ಹುಡುಗಿಯೂ ಆತನನ್ನು ಪ್ರೀತಿಸುತ್ತಾಳೆ. ನಾನೂ ಪ್ರಾಮಾಣಿಕವಾಗಿ ಪ್ರೀತಿಸುತ್ತೇನೆ' ಎಂದಿದ್ದಾಳೆ ಪೂನಂ.

ಪೂನಂ ಮೈಚಳಿ ಬಿಟ್ಟು ಕಾಣಿಸಿಕೊಂಡಿದ್ದ 'ನಶಾ' ಪ್ರೇಕ್ಷಕರಿಗೆ ನಶೆ ಏರಿಸಿರಲಿಲ್ಲ. ಹೀಗಾಗಿ ಬಿಡುಗಡೆಯಾಗಬೇಕಿರುವ 'ಹೆಲೆನ್' ಬಗ್ಗೆ ಹೆಚ್ಚು ಹೇಳಲು ಆಕೆ ಸಿದ್ಧಳಿಲ್ಲ. ಆದರೆ ಅದು ಪಕ್ಕಾ ಪೂನಂ ಪಾಂಡೆ ಚಿತ್ರವಂತೆ. ಆಕೆಯ 'ವಸ್ತ್ರಸಂಹಿತೆ'ಯ ಕಥನ ಎಲ್ಲಿವರೆಗೆ ಮುಂದುವರಿಯುವುದೋ ಗೊತ್ತಿಲ್ಲ. ಟ್ವಿಟರ್‌ನಲ್ಲಿ ತನ್ನನ್ನು ಹಿಂಬಾಲಿಸುವ ಲಕ್ಷಾಂತರ ಜನರನ್ನೇ ಆಕೆ ಅಭಿಮಾನಿಗಳು ಎಂದು ಭಾವಿಸಿರಬಹುದು. ಆ 'ಅಭಿಮಾನಿ'ಗಳಲ್ಲಿ ಸ್ವಲ್ಪ ಮಂದಿ 'ನಶಾ' ಸಿನಿಮಾ ನೋಡಿದ್ದರೂ ಅದು ಭರ್ಜರಿ ಗೆಲುವನ್ನೇ ಕಾಣುತ್ತಿತ್ತು ಅಲ್ಲವೇ?

■ ಅಮಿ